ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತಹ ವೈಜ್ಞಾನಿಕ ಪಾರ್ಕ್‌ಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ದಕ್ಷಿಣ ಕನ್ನಡ ಜಿಲ್ಲೆಯ ವಾಮಂಜೂರಿನಲ್ಲಿ ಸರ್ಕಾರಿ ಜಮೀನಿನಲ್ಲಿ 'ಪಿಲಿಕುಳ' ಎಂಬ ಹೆಸರಿನಲ್ಲಿ ಒಂದು ಪಾರ್ಕ್‌ನ್ನು ನಿರ್ಮಿಸಲಾಗಿದೆಯೇ?

ಇ) ಇದ್ದರೆ ಅದರ ರೂಪರೇಷೆಗಳೇನು ಹಾಗೂ ಇದರ ಅನುಷ್ಠಾನದ ಕ್ರಮಗಳೇನು?

ಈ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ತಗಲುವ ವೆಚ್ಚವೆಷ್ಟು? ಸರ್ಕಾರದವರು ಈ ಯೋಜನೆಗೆ ಎಷ್ಟು ಹಣ ಮಂಜೂರು ಮಾಡಿರುವರು?

ಉ) ಮಲೆನಾಡು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರ ವಿವೇಚನಾ ನಿಧಿಯಿಂದ ಸರ್ಕಾರವು ಈ ಯೋಜನೆಗೆ ಹಣ ಒದಗಿಸಲು ನಿರ್ಧರಿಸಿದೆಯೇ?

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಪರಿಸರ ಜೀವಿಶಾಸ್ತ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ಮೂಲಗಳ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಸಮೀಪ ವಿಜ್ಞಾನ ಪಾರ್ಕ್‌ನ್ನು ನಿರ್ಮಿಸಲು ದಕ್ಷಿಣ ಕನ್ನಡ ಜಿಲ್ಲಾ ವಿಜ್ಞಾನ ಮತ್ತು ತಂತ್ರವಿದ್ಯಾ ಸಮಿತಿಯು, ಇತರೆ ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳು ಯೋಜಿಸುತ್ತಿದೆ. ಹಾಗೂ ಈ ಬಗ್ಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸುತ್ತಿದೆ.

ಆ) ಇಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲಾ ವಿಜ್ಞಾನ ಮತ್ತು ತಂತ್ರವಿದ್ಯಾ ಸಮಿತಿಯು 'ಪಿಲಿಕುಳ' ಎಂಬ ನಿಸರ್ಗಧಾಮವನ್ನು ಸ್ಥಾಪಿಸಲು ಯೋಜನೆ ತಯಾರಿಸುತ್ತಿದೆ.

ಇ) ವಿವರವಾದ ಯೋಜನಾ ವರದಿಯಲ್ಲಿ ಪಾರ್ಕ್ ನಿರ್ಮಿಸಲು ಬೇಕಾಗುವ ಎಲ್ಲಾ ವಿವರಗಳನ್ನು ಒಳಗೊಂಡಿರುತ್ತದೆ.

ಈ) 'ಪಿಲಿಕುಳ' ನಿಸರ್ಗಧಾಮ ಸ್ಥಾಪಿಸಲು ಸುಮಾರು ಹತ್ತು ಕೋಟಿ ರೂಪಾಯಿಗಳು ಬೇಕೆಂದು ಸ್ಥೂಲವಾಗಿ ಅಂದಾಜು ಮಾಡಲಾಗಿದೆ. ಇದರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪಾಲು ಸುಮಾರು ಒಂದು ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಿರುತ್ತಾರೆ. ಈವರೆಗೆ ಯಾವುದೇ ಹಣ ಮಂಜೂರು ಮಾಡಿಲ್ಲ.

ಉ) -ಇಲ್ಲ-

ವಿಷಯ:- ಹುಬ್ಬಳ್ಳಿ-ಬಾಗಲಕೋಟೆಯ ರಾಜ್ಯ ಹೆದ್ದಾರಿ ಅಗಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 608 (708)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಬಾಗಲಕೋಟೆಯ ನಡುವೆ ಹಾಯ್ದು ಹೋಗಿರುವ ರಾಜ್ಯ ಹೆದ್ದಾರಿ ರಸ್ತೆಯ ಅಗಲ ಕಡಿಮೆ ಇರುವುದರಿಂದ ವಾಹನಗಳ ಸುರಕ್ಷಿತ ಓಡಾಟಕ್ಕೆ ಅನಾನುಕೂಲವಾಗಿರುವುದು ಮತ್ತು ಹೆಚ್ಚಿನ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಈ ರಸ್ತೆಯನ್ನು ಅಗಲ ಮಾಡಲು ಸರ್ಕಾರದವರು ಕೈಕೊಂಡ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಹುಬ್ಬಳ್ಳಿ - ಬಾಗಲಕೋಟೆ ರಾಜ್ಯ ಹೆದ್ದಾರಿಯು 125.10 ಕೀಮೀ. ಉದ್ದವಿದೆ. ಇದರಲ್ಲಿ 57.60 ಕಿಮೀ. ಉದ್ದವು ಮಧ್ಯಮ ಪಥವಿರುತ್ತದೆ. (5.50 ಮೀ) ಉಳಿದ 67.50 ಕಿಮೀ. ಉದ್ದವು ಏಕ ಪಥವಾಗಿರುತ್ತದೆ. (3.75) ರಸ್ತೆಯ ತಿರುವುಗಳಲ್ಲಿ ಹಾಗೂ ಅಪಾಯಕಾರಿ ಸ್ಥಳಗಳಲ್ಲಿ ಸೂಕ್ತ ಎಚ್ಚರಿಕಾ ಫಲಕಗಳನ್ನು ಹಾಕಲಾಗಿದೆ. ರಸ್ತೆಯನ್ನು ಸುಸ್ಥಿತಿಯಲ್ಲಿ ನಿರ್ವಹಿಸಲಾಗಿದೆ. ಅಗಲ ಕಡಿಮೆ ಇರುವುದರಿಂದ, ಹೆಚ್ಚಿನ ಅಪಘಾತ ಸಂಭವಿಸುತ್ತಿದೆ ಎಂಬುದು ಸರಿಯಲ್ಲ.

ಆ) 1996-97ರ ಸಾಲಿನಲ್ಲಿ ಸದರಿ ರಸ್ತೆಯ ಆಯ್ದ ಭಾಗಗಳಲ್ಲಿ ಒಟ್ಟಾರೆ 13.23 ಕಿಮೀ. ಉದ್ದಕ್ಕೆ ಮಧ್ಯಮ ಪಥಕ್ಕೆ (5.50 ಮೀಟರ್) ಅಗಲಪಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿವೆ.

ವಿಷಯ:- ದ.ಕ. ಜಿಲ್ಲೆಯ ಕಾಟಿಪಾಳ್ಯ ಕಾಲೋನಿಯ ರಸ್ತೆ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 609 (960)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಟಿಪಾಳ್ಯ ಕಾಲೋನಿಯ ರಸ್ತೆಯ ಉದ್ದ ಎಷ್ಟು, ಸದರಿ ರಸ್ತೆಯ ಡಾಂಬರೀಕರಣವಾಗಿ ಎಷ್ಟು ವರ್ಷಗಳಾಗಿವೆ?

ಆ) ಸದರಿ ರಸ್ತೆಯು ದುಸ್ಥಿತಿಯಲ್ಲಿದ್ದು, ಅದನ್ನು ಕೂಡಲೇ ಡಾಂಬರೀಕರಣ ವ್ಯವಸ್ಥಿತಗೊಳಿಸುವ ಕೆಲಸವನ್ನು ಸರಕಾರದವರು ಕೈಗೊಳ್ಳುವರೆ, ಹಾಗಿದ್ದಲ್ಲಿ ಯಾವಾಗ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-